**9. ಶಾಸನ ರಚನೆ :**

**ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005**
**ಪರ್ಯಾಲೋಚನಾ ಪ್ರಸ್ತಾವ**

**ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು**

**ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)** :– ಮಾನ್ಯ ಅಧ್ಯಕ್ಷರೆ, ಉಭಯ ಸದನಗಳಿಂದ ಅಂಗೀಕಾರವಾಗಿರುವಂತೆ ಹಾಗೂ ಘನತೆವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂದಿರುಗಿಸಲಾಗಿರುವ 2005 ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)** :– ಮಾನ್ಯ ಅಧ್ಯಕ್ಷರೆ, ಪ್ರತಿ ಪಕ್ಷದವರನ್ನು ಬಿಟ್ಟು ಇದರ ಬಗ್ಗೆ ಚರ್ಚೆ ಮಾಡಬೇಕೆಂಬ ಉದ್ದೇಶ ನಮಗೂ ಕೂಡ ಇಲ್ಲ. ಈ ಬಿಲ್ ಈಗಾಗಲೇ ಅಸೆಂಬ್ಲಿ ಮತ್ತು ಕೌನ್ಸಿಲ್‌ನಲ್ಲಿ ಪಾಸ್ ಆಗಿತ್ತು. ಆದರೆ, ಅನಂತರ ರಾಜ್ಯಪಾಲರ ಹತ್ತಿರ ಹೋದಾಗ ಲ್ಯಾಂಡ್ ರೆವಿನ್ಯು ಆಕ್ಟ್ 69 (a) ಗೆ ನಾವು ಹಿಂದೆ ಅಮೆಂಡ್‌ಮೆಂಟ್ ತಂದಿದ್ದೇವೆ. ಇದರಲ್ಲಿ ಸರ್ಕಾರದ ಸ್ವತ್ತುಗಳನ್ನು ಹರಾಜು ಮೂಲಕ ಮಾರಾಟ ಮಾಡುವಂಥ ಸಂದರ್ಭದಲ್ಲಿ ಹರಾಜಿನ ಮಾರಾಟವಾಗಿದ್ದಕ್ಕೆ 30 ದಿವಸದಲ್ಲಿ confirmation ಮಾಡಬೇಕೆಂಬುದರ ಬಗ್ಗೆ ಸಂಬಂಧಪಟ್ಟಂತೆ ನಾವು ಬಿಲ್ ಅನ್ನು ತೆಗೆದುಕೊಂಡು ಬಂದಿದ್ದೆವು. ಆ ಒಂದು ಕಾನೂನಿಗೆ ಈ ಸದನ ಮತ್ತು ವಿಧಾನ ಪರಿಷತ್ ಕೂಡ ಒಪ್ಪಿಗೆ ನೀಡಿತ್ತು. ಆ ನಂತರ ಅದು ರಾಜ್ಯಪಾಲರ ಒಪ್ಪಿಗೆಗೆ ಹೋದ ಸಂದರ್ಭದಲ್ಲಿ ಕೆಲವು ಸರ್ಕಾರದ ಸ್ವತ್ತುಗಳು ಪರಂಪರೆ ಇರತಕ್ಕಂಥ ಐತಿಹಾಸಿಕವಾದ ಕೆಲವೊಂದು ಕಟ್ಟಡಗಳು ಇರುತ್ತವೆ. ಇಂಥವುಗಳನ್ನು ಈ ಒಂದು ಹರಾಜಿನಲ್ಲಿ ಸೇರಿಸಬಾರದೆಂದು ಸೂಚನೆ ಕೊಟ್ಟಿದ್ದಾರೆ. ಆದ್ದರಿಂದ, ಇದರಲ್ಲಿ ಅದನ್ನು exclude ಮಾಡಬೇಕೆಂದು ಸದರಿ ಅಮೆಂಡ್‌ಮೆಂಟ್‌ನ್ನು ತಂದಿದ್ದೇವಷ್ಟೆ. ಮತ್ತೆ ಇದನ್ನು ಇವತ್ತೇ ಪರ್ಯಾಲೋಚನೆಗೆ ತೆಗೆದುಕೊಂಡು, ಅನುಮೋದನೆ ಕೊಡಬೇಕೆಂದು ನಾನು ಏತಕ್ಕಾಗಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆಂದರೆ, ಸರ್ಕಾರದ ಭೂಮಿಯನ್ನು ನಾವು ಈಗಾಗಲೇ ಹರಾಜು ಮಾಡಿರತಕ್ಕಂಥವುಗಳಿಗೆ

confirmation ಮಾಡುವುದಕ್ಕೆ ಆಗುತ್ತಿಲ್ಲ. ಇದರ ಬಗ್ಗೆ ರಾಜ್ಯಪಾಲರ ಸೂಚನೆ ನೀಡಿರತಕ್ಕಂಥಾದ್ದನ್ನು ನಾವು ಅಮೆಂಡ್‌ಮೆಂಟ್ ಮಾಡಿ ಇದರಲ್ಲಿ ಸೇರಿಸದಿದ್ದರೆ ಈಗಾಗಲೇ ಹರಾಜು ಆಗಿರುವ ಪ್ರಾಪರ್ಟಿಗಳನ್ನು ನಾವು confirmation ಮಾಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಸುಮಾರು 160 ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರತಕ್ಕಂಥಾದ್ದನ್ನು ವಾಪಸ್ಸು ತೆಗೆದುಕೊಂಡು ಅದನ್ನು ಹರಾಜು ಮಾಡಿ ಅದರಿಂದ ಸುಮಾರು 170 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಜಮಾ ಆಗುವಂಥ ಸಂದರ್ಭದಲ್ಲಿ ಹರಾಜು ಆಗಿರುವುದನ್ನು confirmation ಮಾಡಬೇಕಾಗುತ್ತದೆ. ಈಗ confirmation ಆಗದೇ ಇರುವುದಕ್ಕೆ ಇದು ಬಹಳ ತುರ್ತೆಂದು ತೆಗೆದುಕೊಂಡಿದ್ದೇವೆಯೇ ಹೊರತು ಪ್ರತಿಪಕ್ಷದವರನ್ನು ಹೊರಗಿಟ್ಟು ಈ ಬಿಲ್ ಅನ್ನು ಪಾಸ್ ಮಾಡತಕ್ಕಂಥ ಕೆಲಸವನ್ನು ನಾವೇನು ಮಾಡುತ್ತಿರಲಿಲ್ಲ. ತುಂಬಾ ಅರ್ಜೆನ್ಸಿ ಇರುವುದರಿಂದ ಮಾಡುತ್ತಿದ್ದೇವೆ ಹೊರತು ಬೇರೆ ದೃಷ್ಟಿಕೋನವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ ದಯವಿಟ್ಟು ಈ ಬಿಲ್‌ಗೆ ಅನುಮೋದನೆ ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

**( 8:30 pm)**

**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ** :– ನಾನು ಹೊರಗೆ ಹೋದರೆ ಕೋರಂ ಎಲ್ಲಿ ಆಗುತ್ತದೆ. ಕೋರಂ ಇಲ್ಲದೆ ಬಿಲ್‌ಅನ್ನು ಹೇಗೆ ಪಾಸ್ ಮಾಡುತ್ತೀರಿ. ನಾನು ಹೊರಗೆ ಹೋಗುತ್ತೇನೆ.

**ಶ್ರೀ ಡಿ.ಎನ್. ಜೀವರಾಜ್** :– ನೀವು ಹೊರಗೆ ಹೋದರು ಕೋರಂ ಆಗುತ್ತದೆ.

**(ಈ ಹಂತದಲ್ಲಿ ಮಾನ್ಯ ಕೆ. ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು)**

**<u>ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2005</u>**

**<u>ಪುನರ್ ಪರ್ಯಾಲೋಚನೆ ಪ್ರಸ್ತಾವ</u>**

**ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)** :– ಮಾನ್ಯ ಅಧ್ಯಕ್ಷರೆ, ಉಭಯ ಸದನಗಳಿಂದ ಅಂಗೀಕಾರವಾಗಿರುವಂತೆ ಹಾಗೂ ಘನತೆವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂದಿರುಗಿಸಲಾಗಿರುವ 2005 ನೇ

ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

**ಅಧ್ಯಕ್ಷರು :–** ಪ್ರಸ್ತಾವ ಏನೆಂದರೆ, " 2005 ರ ಕರ್ನಾಟಕ ಭೂ ಕಂದಾಯ (ಎರಡನೆ ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ತಿದ್ದುಪಡಿ

ಖಂಡ – 2

**ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :–** ಮಾನ್ಯ ಅಧ್ಯಕ್ಷರೆ, ಖಂಡ–2 ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ. 2005 ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕದ 2 ನೇ ಖಂಡದಲ್ಲಿ 69 (ಎ) ಪ್ರಕರಣದ ಒಂದನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ,

"ಪರಂತು, ಪರಂಪರೆಯ ತಾಣಗಳು ಮತ್ತು ಕಟ್ಟಡಗಳು ಮತ್ತು ಅವಶೇಷಗಳನ್ನು ಈ ಪ್ರಕರಣದಡಿಯಲ್ಲಿ ಏಲೇ ಮಾಡತಕ್ಕದ್ದಲ್ಲ"

ತಿದ್ದುಪಡಿ ಪ್ರಸ್ತಾವ ಮಂಡಿಸಲಾಯಿತು

**ಅಧ್ಯಕ್ಷರು :–** ಪ್ರಸ್ತಾವ ಏನೆಂದರೆ, 2005 ಕರ್ನಾಟಕ ಭೂ ಕಂದಾಯ ಎರಡನೆ ತಿದ್ದುಪಡಿ ವಿಧೇಯಕದ 2 ನೇ ಖಂಡದಲ್ಲಿ 69 (ಎ) ಪ್ರಕರಣದ ಒಂದನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ,

"ಪರಂತು, ಪರಂಪರೆಯ ತಾಣಗಳು ಮತ್ತು ಕಟ್ಟಡಗಳು ಮತ್ತು ಅವಶೇಷಗಳನ್ನು ಈ ಪ್ರಕರಣದಡಿಯಲ್ಲಿ ಏಲೇ ಮಾಡತಕ್ಕದ್ದಲ್ಲ"

ತಿದ್ದುಪಡಿ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

**ಅಧ್ಯಕ್ಷರು** :- "ತಿದ್ದುಪಡಿಯಾದ 2 ನೇ ಖಂಡವು ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ತಿದ್ದುಪಡಿಯಾದ 2 ನೇ ಖಂಡವು ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

**ಅಧ್ಯಕ್ಷರು** :- ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

**ಶ್ರೀ ಜಗದೀಶ್ ಶೆಟ್ಟರ್** (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಉಭಯ ಸದನಗಳಿಂದ ಅಂಗೀಕಾರವಾಗಿರುವಂತೆ ಹಾಗೂ ಘನತೆವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂದಿರುಗಿಸಲಾಗಿರುವ 2005 ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು

**ಅಧ್ಯಕ್ಷರು** :- ಪ್ರಸ್ತಾವ ಏನೆಂದರೆ, "2005 ರ ಕರ್ನಾಟಕ ಭೂ ಕಂದಾಯ (ಎರಡನೆ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಪುನರ್ ಅಂಗೀಕರಿಸುವುದು"

ಪುನರ್ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಪುನರ್ ಒಪ್ಪಿಗೆ ನೀಡಲಾಯಿತು.